**ಮುಟ್ಟಿಸಲು ಮಕ್ಕಳ ಸಾಹಿತ್ಯವನ್ನು ಬಳಸಿಕೊಳ್ಳುತ್ತಿದ್ದೀರಿ ಎನ್ನಿಸುತ್ತದೆ.**

ಈ ನಿಮ್ಮ ಪ್ರಶ್ನೆಗೆ ನಾನು ಉತ್ತರ ಕೊಡುವುದಿಲ್ಲ. ಯಾಕೆಂದರೆ, ನನ್ನ ಸ್ಪಷ್ಟ ಒಲವು ನಿಲುವುಗಳನ್ನು ನೀವೇ ಚೆನ್ನಾಗಿ ಗ್ರಹಿಸಿ ಪ್ರೀತಿ ತೋರಿದ್ದೀರಿ. ಆದರೆ ನಾನು ಈ ಪ್ರಶ್ನೆಯ ಆಚೆ ಹೋಗಿ ಕೆಲವು ಮಾತುಗಳನ್ನು ಹೇಳುವೆ. ಮನುಷ್ಯರು ಬೇರೆ, ಮಕ್ಕಳು ಬೇರೆ ಎಂದು ಗ್ರಹಿಸಿ ಮಕ್ಕಳಿಗೆ ನಾನು ಹಾಡು, ಕಥೆ, ನಾಟಕ, ಮತ್ತು ಮಾತುಗಳನ್ನು ರೂಪಿಸುತ್ತಿರುವೆ. ಮಕ್ಕಳೊಂದಿಗೆ ಸೇರಿ ನಾವು ಪ್ರಕೃತಿಗೆ ಹಿಂದಿರುಗುವ ಕನಸು ಕಾಣದಿದ್ದರೆ ನಮಗೆ ಗತಿ ಇಲ್ಲ. ಮನುಷ್ಯರು ಅತಿ ಮನುಷ್ಯರಾಗಿ, ಶಸ್ತ್ರವಾಗಿ ಬದಲಾಗಿ, ಇತರ ಜೀವಜಾಲಕ್ಕೆ ಕಂಟಕವಾದರೆ...

◆ **ನೀವು ಮಕ್ಕಳನ್ನು ನಿಮ್ಮ ಓದುಗರು, ಕೇಳುಗರು ಆಗಿ ಮತ್ತೆ ಮತ್ತೆ ಆಯ್ದುಕೊಳ್ಳುವುದು ಯಾಕೆ? ನಿಮ್ಮಲ್ಲಿರುವ ಜ್ಞಾನ, ಕಳಕಳಿ ದೊಡ್ಡವರಿಗೂ ಅಷ್ಟೇ ಅಗತ್ಯವಾಗಿ ಮುಟ್ಟಬೇಕಾದದ್ದೇ ಅಲ್ಲವೇ?**

ನನಗೆ ಮಕ್ಕಳು ಎಂದರೆ ಬರೀ ಮಕ್ಕಳಲ್ಲ. ಎಲ್ಲರೂ ಮಕ್ಕಳೇ ಎಂಬುದು ನನ್ನ ನಿಲುವು. ಈ ಭೂಮಿಗೆ ಯಾರು ಮಕ್ಕಳಲ್ಲ? ಮಕ್ಕಳು ಎಂಬುದು ಒಂದು ಮನೋಸ್ಥಿತಿ. ಯಾರು ಬೇಕಾದರೂ ಮಕ್ಕಳತ್ವ ಪಡೆದು ಜೀವಿಸಬಹುದು. ಮಕ್ಕಳತ್ವ ಎಂದರೆ ಪ್ರೀತಿ ತತ್ವ. ಮಕ್ಕಳ ಒಳಗೆ ಪ್ರೀತಿ ತತ್ವ ಇದ್ದೇ ಇರಬೇಕು, ಅದು ಇರುತ್ತದೆ ಎಂದು ನಂಬಿ ಬರೆಯುತ್ತಿರುವೆ, ಹಾಡುತ್ತಿರುವೆ, ಮಕ್ಕಳೊಂದಿಗೆ ಹೆಚ್ಚು ಮಾತಾಡುತ್ತಿರುವೆ.

◆ **ವಾಸ್ತವ ಸಂಗತಿಗಳನ್ನು ಫಿಕ್ಷನ್ ಆಗಿಸುವಾಗ ಅದರಲ್ಲೂ ಮಕ್ಕಳಿಗೆ ಕಥೆಯನ್ನಾಗಿಸುವ ಸಂದರ್ಭದಲ್ಲಿ ನೀತಿ, ಉಪದೇಶಗಳು, ನಾಗರಿಕರ ಜವಾಬ್ದಾರಿಗಳು ಮುನ್ನೆಲೆಗೆ ಬಂದು ಸೃಜನಶೀಲತೆ ಹಿಂದೆ ಸರಿಯೋ ಸಾಧ್ಯತೆ ಇರುತ್ತದೆ. ನೀವಿದನ್ನು ನಿಮ್ಮ ಬರಹಕ್ಕೆ ಕನೆಕ್ಟ್ ಮಾಡಿ ಹೇಗೆ ಅರ್ಥೈಸುವಿರಿ?**

ನನ್ನ ಪಾಡಿಗೆ ನಾನು ನನ್ನ ಅರಿವಿನ ಸೆಲೆ ಹಿಡಿದು ಬರೆಯುವುದಷ್ಟೇ ನನ್ನ ಕೆಲಸ. ಅದು ನನ್ನ ಮನಸ್ಸನ್ನು ಒಳಗೊಂಡು ಓದುಗರ ಮನಸ್ಸಿನೊಳಗೆ ಮುಲುಗುಟ್ಟಿ ಅವರೊಳಗಿನ ಜೀವ ಶಕ್ತಿಯನ್ನು ಕೆದಕಿ ಕಂಡುಕೊಳ್ಳುವಂತೆ ಮಾಡಿದರೆ, ಅದನ್ನೇ ನಾನು ಸೃಜನಶೀಲತೆ ಎಂದು ಕರೆಯುವುದು.

ನನ್ನ 'ಭೂಮಂತ್ರಯ್ಯನ ಕಥೆಗಳು' ಪುಸ್ತಕವನ್ನು ಮನಸ್ಸಿನಲ್ಲಿಟ್ಟುಕೊಂಡು ನೀವು ಈ ಪ್ರಶ್ನೆ ಕೇಳುತ್ತಿರುವುದು...



ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಬಿಳಿಗೆರೆಯ ಕೃಷ್ಣಮೂರ್ತಿ ಬಿಳಿಗೆರೆ ಶಿಕ್ಷಣ ಇಲಾಖೆಯಲ್ಲಿ ಹಲವು ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದವರು. ಈಗ ನಿವೃತ್ತರು. ಶಿಕ್ಷಣ ಹಾಗೂ ಕೃಷಿ ಕ್ಷೇತ್ರದಲ್ಲಿನ ತಮ್ಮ ಅನುಭವಗಳನ್ನು ಮಕ್ಕಳಿಗೆ ತಲುಪಿಸುವಲ್ಲಿ ನಿರತವಾಗಿರುವ ಅಪರೂಪದ ಕವಿ–ಲೇಖಕ. ಸಾವಯವ ಕೃಷಿ, ಮಳೆನೀರು ಸಂಗ್ರಹವನ್ನು ಅಭಿಯಾನದ ರೂಪದಲ್ಲಿ ಪ್ರಚುರಪಡಿಸುತ್ತಿರುವ ಕೃಷ್ಣಮೂರ್ತಿ ಅವರು ತತ್ವಪದಗಳ ಹಾಡುವಿಕೆಯಲ್ಲಿ ತಮ್ಮ ಬರಹದ ಬದುಕಿನ ತಾತ್ವಿಕತೆಯನ್ನು ರೂಪಿಸಿಕೊಂಡವರು. 'ಸಾವಿರ ಕಣ್ಣಿನ ನವಿಲು', 'ಕಿಂಚಿತ್ತು ಪ್ರೀತಿಯ ಬದುಕು', 'ದಾಸಯ್ಯ ಇದು ಕನಸೇನಯ್ಯ', 'ಧರೆ ಮೇಲೆ ಉರಿಪಾದ' ಇವು ಪ್ರಕಟಿತ ಕಾವ್ಯ ಕೃತಿಗಳು. 'ಗುಡು ಗುಡು ಗುಡ್ಡ', 'ಪದ್ಯದ ಮರ', 'ಹಾಡೆ ಸುವ್ವಿ', 'ಮಳೆ ಹುಚ್ಚ', 'ನವಿಲೂರಿನ ಕತೆ', 'ಕತ್ತೆ ಹಾಡು' ಹಾಗೂ 'ಚಗಚೆ ಹೂವಿನ ಹುಡುಗಿ' ಮಕ್ಕಳಿಗಾಗಿ ರಚಿಸಿದ ಕೆಲವು ಮುಖ್ಯ ಕೃತಿಗಳು. 'ಭೂಮಂತ್ರಯ್ಯನ ಕತೆಗಳು' ಕೇಂದ್ರ ಸಾಹಿತ್ಯ ಅಕಾಡೆಮಿಯ 'ಬಾಲ ಸಾಹಿತ್ಯ ಪುರಸ್ಕಾರ' ತಂದುಕೊಟ್ಟ ಕೃತಿ.